ಎಂದೋ ಮರೆತುಹೋಗಿದ್ದ ಯಾವುದೋ ಬಾಲ್ಯದ ಘಟನೆ ಅಥವಾ ಎಂದೋ ಕಂಡ ಮನುಷ್ಯ ಕನಸಲ್ಲಿ ಬರುವುದು ಅಥವಾ ನೆನಪಾಗುವುದು, ನಮ್ಮನ್ನು ನಾವು ಯಾವುದೋ ಘಟನೆಯಲ್ಲಿ ಕನಸಿನಲ್ಲಿ ಕಾಣುವುದು. ಇವೆಲ್ಲವನ್ನೂ ಸೃಷ್ಟಿಸುವ, ಭಾವನೆಗಳಿಗೆ ಕಾಲ್ಪನಿಕ ಘಟನೆಗಳನ್ನು ನೇಯುವ ಮನಸ್ಸಿನ ಅದ್ಭುತಕ್ಕೆ, ಅಸೀಮ ಸಾಮರ್ಥ್ಯಕ್ಕೆ ಮಿತಿ ಅಥವಾ ತರ್ಕ ಎಲ್ಲಿದೆ? ಮನೋಲೋಕದ ಪರಿಭ್ರಮಣ ಯಾರಿಗೂ ನಿಲುಕದ ಒಂದು ಅಗೋಚರ ಸತ್ಯ! ನಮ್ಮನ್ನು ನಿಯಂತ್ರಿಸುವ ನಿರ್ದೇಶಕ!

* * *

ಮಗಳಿಗೆ ಕರೆ ಮಾಡಿದ ವೀಣಮ್ಮನಿಗೆ, ನಿವಿ ತಾನು ಆಪ್ತ ಸಮಾಲೋಚನೆಗೆ ಹೋಗುತ್ತಿದ್ದು, ತನಗೆ ಸಮ್ಮೋಹನ ಕ್ರಿಯೆಗೆ ಒಳಪಡಿಸಿದ್ದಾರೆ ಎಂಬ ಸಂಗತಿ ತಿಳಿಸಿದಾಗ ಬೆಳಗಾಗುವುದರಲ್ಲಿ ಮಗಳ ಮನೆಗೆ ಕೇಶವ ಮತ್ತು ವೀಣಾ ದಂಪತಿ ಧಾವಿಸಿ ಬಂದಿದ್ದರು. ಅವರಿಗೆ ಈ ಸಂಗತಿಯನ್ನು ಜೀರ್ಣಿಸಿಕೊಳ್ಳಲಾಗಿರಲಿಲ್ಲ.

ಅಳಿಯನನ್ನು ಬಾಯಿಗೆ ಬಂದಂತೆ ಬೈದಾಡಿ, ತರಾಟೆಗೆ ತೆಗೆದುಕೊಂಡರು.

'ನಮಗೆ ಒಂದು ಮಾತೂ ತಿಳಿಸದೆ ಅದು ಹೇಗೆ ನೀನು ನನ್ನ ಮಗಳನ್ನು ಇಂಥ ಟ್ರೀಟ್‌ಮೆಂಟಿಗೆ ಒಳಪಡಿಸಿದೆ? ನಿನ್ನ ಹುಳುಕನ್ನು ಮುಚ್ಚಿಡಲು ನನ್ನ ಮಗಳನ್ನು ಹುಚ್ಚಿ ಮಾಡಬೇಡ. ಯಾರೂ ದಿಕ್ಕಿಲ್ಲದ ಪರದೇಶಿಗೆ ಮಗಳನ್ನು ಕೊಟ್ಟು ತಪ್ಪು ಮಾಡಿದೆ. ನೋಡು, ನನ್ನ ಮಗಳ ಮುಖ ಹೇಗೆ ಬಾಡಿ ಹೋಗಿದೆ. ಅವಳ ಗುರುತೇ ಹಿಡಿಯಲಾಗದಷ್ಟು ಸೊರಗಿಹೋಗಿದೆ. ನಿನಗೆ ನೋಡಿಕೊಳ್ಳಲು ಆಗದಿದ್ದರೆ ಹೇಳು. ಬೇಡವಾದರೆ ಬೇಡ. ನನ್ನ ಮಗಳನ್ನು ಸಾಕುವ ಚೈತನ್ಯ ನನ್ನಲ್ಲಿನ್ನೂ ಇದೆ' ಕೇಶವರು ಸಂಕಟದ ಭರದಲ್ಲಿ ಮನಸ್ಸಿಗೆ ಬಂದದ್ದೆಲ್ಲವನ್ನೂ ಒದರಿದರು.

ಪ್ರದೀಪ ತಾಳ್ಮೆಯಿಂದಲೇ ಆಲಿಸುತ್ತಿದ್ದವನು ನಂತರ ತಣ್ಣಗೆ ಪ್ರಶ್ನಿಸಿದ, 'ಒಂದು ವಾರದ ಹಿಂದೆ ನಿಮ್ಮ ಮಗಳು ಕೈ ಕುಯ್ಕೊಂಡು ಜೀವ ಹಾನಿ ಮಾಡಿಕೊಂಡಿದ್ದಳು. ಇದು ನಿಮಗೆ ಗೊತ್ತಾ?'

ಕೇಶವ ಮತ್ತು ವೀಣಮ್ಮ ಬೆಚ್ಚಿಬಿದ್ದರು, 'ಹೌದಾ? ನಮ್ಗೆ ಗೊತ್ತಿಲ್ಲ. ಇದೇನಾಗುತ್ತಿದೆ?'

'ಅಥವಾ ಅದೂ ನಾನೇ ಮಾಡಿದ್ದು ಅಂತ ನನ್ನ ಮೇಲೇನೆ ಅಪವಾದ ಹಾಕ್ತೀರಾ?' ಅವರಿಬ್ಬರ ಬಾಯಿಂದಲೂ ಮಾತೇ ಹೊರಡದೆ ಮುಖಭಾವ ಒಮ್ಮೆಗೇ ಕಂದಿ ಹೋಯಿತು.

'ನಿಮಗೆ ನಿಮ್ಮ ಮಗಳಲ್ಲಿ ಸಮಸ್ಯೆ ಇದ್ದದ್ದು ತಿಳಿದಿತ್ತು. ಆ ಕಾರಣದಿಂದ ನೀವು ಮದುವೆ ಮಾಡಲು ಹಿಂದೇಟು ಹಾಕಿದಿರಿ. ಹಿಂದು ಮುಂದು ಇಲ್ಲದ, ನೀವು ಈಗ ತಾನೇ ತಿಳಿಸಿದಂತೆ ಪರದೇಶಿ ಹುಡುಗ ದೊರೆತಾಗ ನಿವೀನ್ನ ನನಗೆ ಕೊಡುವ ಮನಸ್ಸು ಮಾಡಿದಿರಿ. ಆದರೆ ನನಗೆ ಆಕೆಯಲ್ಲಿ ಸಮಸ್ಯೆ ಇದೆ ಎಂದು ಅರಿವಾಗುವಾಗ ನನ್ನ ಮೇಲೆ ಸಲ್ಲದ ಅಪವಾದಗಳನ್ನು ಹಾಕಿ ನೀವು ಸಾಚಾ ಮನುಷ್ಯರೆಂದು ನಿರೂಪಿಸುವ ಯತ್ನ ಮಾಡತೊಡಗಿದಿರಿ'. ಪ್ರದೀಪ ನೇರವಾಗಿ ಖಂಡಿಸಿದಾಗ ಕೇಶವ ಮತ್ತು ವೀಣಮ್ಮ ಭೂಮಿಗಿಳಿದು ಹೋದರು.

'ಸತ್ಯ ಯಾವಾಗಲೂ ಕಹಿಯೇ. ನಾನೂ, ನೀವು ಹಿರಿಯರೆಂದು, ಹೆಣ್ಣು ಕೊಟ್ಟ ಹೆತ್ತವರು, ನನ್ನ ತಂದೆ ತಾಯಿ ಸಮಾನ ಎಂದುಕೊಂಡೇ ಸುಮ್ಮನಿದ್ದೆ. ಆದರೆ ಇವತ್ತು ಇಷ್ಟು ಮಾತನಾಡಲು ನೀವೇ ಅನುವು ಮಾಡಿಕೊಟ್ಟಿರಿ. ಹೋಗಲಿ, ಈಗಲಾದರೂ ಸತ್ಯ ಏನೆಂದು ಹೇಳಿಬಿಡಿ' ಎಂದು ಒತ್ತಿ ಕೇಳಿದ.

ಇಬ್ಬರ ಮುಖವೂ ಅರಕ್ತವಾಗಿತ್ತು. ಕೇಶವರು ಕಡೆಗೆ ಮೌನ ಮುರಿದು,

'ನಮ್ಗೆ ಗೊತ್ತಿಲ್ಲಪ್ಪ. ನಿವಿ ಚಿಕ್ಕವಳಿದ್ದಾಗ ಆಗಾಗ ಕತ್ತಲೇಲಿ ಮೂಲೇಲಿ ಹೋಗಿ ಕೂರೋಳು. ಬೆಳಕೆಂದರೆ ಭಯಪಡೋಳು. ಇತರರ ಜೊತೆ ಬೆರೆಯುತ್ತಲೇ ಇರಲಿಲ್ಲ. ಏನೋ ಸಿಟ್ಟು, ಸದಾ ಸಿಡಿಮಿಡಿ. ಏನೋ ಕೊರಗು. ಕೃತ್ತಿಕಾಳನ್ನು ಕಂಡರೇನೇ ಆಗುತ್ತಿರಲಿಲ್ಲ. ಯಾರನ್ನೂ ಹತ್ತಿರ ಬರಗೊಡುತ್ತಿರಲಿಲ್ಲ. ಯಾರ ಮೇಲೂ ನಂಬಿಕೆ ಇಲ್ಲದವಳಂತೆ ವರ್ತಿಸುತ್ತಿದ್ದಳು. ಬಹಳ ಗಂಭೀರವಾಗಿ ಇರುತ್ತಿದ್ದಳು. ನಮ್ಮ ಮಗಳ ವರ್ತನೆ ನಮ್ಗೇ ಒಗಟೆನಿಸುತ್ತಿತ್ತು. ಕಡೆಗೆ ಅವಳಿಗೆ ಅದೇ ಅಭ್ಯಾಸವಾಯಿತು. ನಾವೂ ಅವಳ ಈ ಸ್ವಭಾವಕ್ಕೆ ಹೊಂದಿಕೊಂಡೆವು. ನಮಗೂ ಸತ್ಯ ಗೊತ್ತಿಲ್ಲಪ್ಪಾ. ನೀನು ಈಗ ಅವಳನ್ನು ಕೌನ್ಸೆಲಿಂಗ್ ಮತ್ತು ಹಿಪ್ನಟೈಸ್ ಎಂದು ಏನೇನೋ ಚಿಕಿತ್ಸೆಗೆ ಒಳಪಡಿಸಿ ಅವಳಿಗೆ ಅದು ಗಂಭೀರವಾಗಿ ಪರಿಣಮಿಸಿದರೆ ಎನ್ನುವ ಆತಂಕ ನಮಗೆ'.

'ಎಲ್ಲವೂ ಸರಿಹೋಗುತ್ತದೆ. ನಂಬಿಕೆ ಇಡಿ. ವೈದ್ಯರ ಮೇಲೂ, ನನ್ನ ಮೇಲೂ! ಆಕೆಯ ಹಿನ್ನೆಲೆ ಏನೇ ಆಗಿರಲಿ, ನಾನು ನಿವಿಯ ಕೈ ಬಿಡುವುದಿಲ್ಲ. ಅಷ್ಟು ನಂಬಿಕೆ ಇಡಿ. ನನ್ನ ಮೇಲೆ' ಅವನು ಸ್ಪಷ್ಟವಾಗಿ ನುಡಿದಾಗ ಕೇಶವರು ಅಳಿಯನಿಗೆ ಕೈ ಮುಗಿದು ಒಂದು ಮಾತೂ ಆಡದೇ ಪತ್ನಿಯೊಂದಿಗೆ ಅಲ್ಲಿಂದ ನಿರ್ಗಮಿಸಿದರು.

ನಿವಿ, ಹೆತ್ತವರು ಆಚೆ ಹೋಗುವುದನ್ನು ನೋಡುತ್ತಾ ಮಂಕಾದಳು. ಅವಳ ಮುಖಭಾವ ಗ್ರಹಿಸಿದವನಂತೆ ಪ್ರದೀಪ ಪತ್ನಿಯ ಬಳಿ ಬಂದು, 'ನಿವಿ, ನಿನಗೆ ಈ ಚಿಕಿತ್ಸೆ ಹಿಂಸೆ ತರುತ್ತಿದೆಯಾ ಹೇಳು? ನಿನಗೆ ಇದು ನೀಗಲಾರದ ಒತ್ತಡ ಎನಿಸಿದರೆ ಬೇಡ. ಇಲ್ಲಿಗೇ ನಿಲ್ಲಿಸಿಬಿಡೋಣ. ನಾನು ಒತ್ತಾಯ ಮಾಡುವುದಿಲ್ಲ. ನನ್ನಿಂದ ನಿನಗೆ ಹಿಂಸೆ ಆಗುತ್ತಿದೆ ಎಂದಾದರೆ ನೇರವಾಗಿ ಹೇಳು. ನಿನ್ನ ಮನಸ್ಸಲ್ಲೇನಿದೆ? ನೀನು ಹೇಗಿದ್ದರೂ ಸರಿಯೇ. ನಾನು ಸದಾ ನಿನ್ನ ಜೊತೆಗಿದ್ದೇನೆ. ನಿನ್ನ ಖುಷಿ ಅಷ್ಟೇ ನನಗೆ ಮುಖ್ಯ. ಬೇರೇ ಏನೂ ಅಲ್ಲ' ಪ್ರದೀಪ ಅವಳ ಕೈ ಹಿಡಿದು ಪ್ರಾಮಾಣಿಕವಾಗಿ ನುಡಿದ. ಪತ್ನಿ ನಲುಗಿ ಸಂಕಟಪಡುವುದನ್ನು ನೆನೆದು ಅವನ ತಾಳಿಕೆಯ ಮಟ್ಟವೂ ಸಡಿಲಿಸಿತ್ತು. ಅವನು ಇದೆಲ್ಲವೂ ಸಾಕೆನಿಸಿ ಅಲ್ಲಿಗೇ ಪೂರ್ಣವಿರಾಮ ಹಾಕುವ ಮಟ್ಟಕ್ಕೆ ಬಂದಿದ್ದ.

ನಿವಿ ಮೊದಲು ಮಾತನಾಡಲಿಲ್ಲ. ಅವನ ಮಾತಿನಲ್ಲಿದ್ದ ಪ್ರಾಮಾಣಿಕತೆ, ಅವನ ಒಲವು, ಕಳಕಳಿ ಅವಳಲ್ಲಿ ಹೊಸ ಆತ್ಮಶಕ್ತಿಯನ್ನು ತುಂಬಿಸಿತ್ತು. ಅವಳೂ ಒಂದು ದೃಢನಿರ್ಧಾರಕ್ಕೆ ಬಂದಂತಿತ್ತು.

'ನಾನು ಏನು ಮಾಡಬೇಕು. ಯಾವುದು ಸರಿ, ಯಾವುದು ತಪ್ಪು ಒಂದೂ ತೋಚುತ್ತಿಲ್ಲ ಪ್ರದೀಪ್. ಸತ್ಯ, ನಂಬಿಕೆಯ ತಳಹದಿಯ ಮೇಲೆ ನಮ್ಮ ದಾಂಪತ್ಯ ನಿಂತಿದೆ. ನನ್ನ ಹಿನ್ನೆಲೆ ಏನೇ ಆಗಿದ್ದರೂ ಸರಿ, ಅದನ್ನು ಅರಿಯುವುದು ನಿಮ್ಮ ಹಕ್ಕು. ನಂತರದ್ದು ನಂತರ! ಹಾಗಾಗಿ ನನ್ನನ್ನು ನಾನು, ಇಂಥ ಪರೀಕ್ಷೆಗೆ ಒಡ್ಡಿಕೊಂಡು ಈ ಆತ್ಮವಂಚನೆಯಿಂದ ಬಿಡುಗಡೆ ಹೊಂದುತ್ತೇನೆ. ಈ ನಿತ್ಯದ ಬೇಗುದಿ, ಈ ತೊಳಲಾಟದ ಕಾರಣ ಅದೇನೇ ಆಗಿರಲಿ, ಈ ಮೂಲಕ ಇದೆಲ್ಲವೂ ಇಂದಿಗೆ ಸಮಾಪ್ತಿಯಾಗಲಿ' ಅವಳ ಧ್ವನಿಯಲ್ಲಿದ್ದ ಖಚಿತತೆ ಮುಖದಲ್ಲಿಯೂ ವ್ಯಕ್ತವಾಯಿತು. ನಿವೇದಿತಾ, ಈ ಬಾರಿ ಮಾನಸಿಕವಾಗಿ ಸಿದ್ಧಳಿದ್ದ ಕಾರಣ, ಮನೆಯಲ್ಲಿ ಹೆಚ್ಚೇನೂ ಘರ್ಷಣೆ ಆಗಲಿಲ್ಲ. ಹೇಳಿದ ಸಮಯಕ್ಕೆ ಸರಿಯಾಗಿ ಹೊರಟು, ಅವರಿಬ್ಬರೂ ಡಾ. ರೂಪಾ ಅವರ ಕ್ಲಿನಿಕ್ ತಲುಪಿದ್ದರು. ಪ್ರದೀಪ ಅವಳನ್ನು ಬಿಟ್ಟು ಅಲ್ಲಿಂದ ಹೊರಟರೂ ಅವನಿಗೆ ಕಚೇರಿಗೆ ಹೋಗಲು ಮನಸ್ಸಾಗಿರಲಿಲ್ಲ. ಅಲ್ಲೇ ಸಮೀಪದ ಮಾಲ್ ಒಂದಕ್ಕೆ ಹೋಗಿ ಅಲ್ಲಿ ಲಾಂಜ್‌ನಲ್ಲಿ ಕುಳಿತು, ಇಲ್ಲಿ ನಡೆಯಬಹುದಾದ ಸಂಗತಿಗಳ ಬಗ್ಗೆ ಯೋಚಿಸುತ್ತಾ ತನ್ನ ಆತಂಕ, ಕಸಿವಿಸಿಯನ್ನು ಹತ್ತಿಕ್ಕುವ ಪ್ರಯತ್ನ ಮಾಡತೊಡಗಿದ.

* * *

ಆ ಕೋಣೆಯಲ್ಲಿ ಮಂದ ಬೆಳಕಿತ್ತು. ನಿವಿ ಆರಾಮ ಕುರ್ಚಿಯಲ್ಲಿ ಒರಗಿ ಕುಳಿತಿದ್ದಳು.

'ನಿಧಾನವಾಗಿ ಕಣ್ಮುಚ್ಚಿಕೋ ನಿವೇದಿತಾ. ಈಗ ದೀರ್ಘವಾಗಿ ಉಸಿರೆಳೆದುಕೋ. ಹ್ಞಾಂ ಹಾಗೆ. ಈಗ ಉಸಿರು ಹೊರಗೆ ಬಿಡು. ಹಾಗೇ ಮತ್ತೊಂದು ಬಾರಿ. ಉಸಿರಾಟ, ಆರಾಮ, ಉಸಿರಾಟ, ಆರಾಮ. ನಿನ್ನ ಮೈ ಮನಸ್ಸು ಹಗುರವಾಗಿದೆ. ಇಪ್ಪತ್ತು, ಹತ್ತೊಂಬತ್ತು, ಹದಿನೆಂಟು' ಆ ಕೋಣೆಯಲ್ಲಿ ಸಣ್ಣಗೆ ಒಂದು ಕಾಡಿನ ಹಿನ್ನೆಲೆಯ ಶಬ್ದ ಕೇಳಿಸುತ್ತಿತ್ತು. ಗಾಳಿ ಬೀಸಿದ ಹಾಗೆ, ಹಕ್ಕಿಗಳು ಚಿಲಿಪಿಲಿ, ಸಣ್ಣಗೆ ನದಿಯ ಹರಿವಿನ ಶಬ್ದ ಅವಳನ್ನು ನಿಧಾನಕ್ಕೆ ಮನಸ್ಸಿನ ಆಳಕ್ಕೆ ಸೆಳೆದುಕೊಂಡು ಹೋಗಲು ಪೂರಕವಾಗಿತ್ತು. ಅವಳು ಹಿಂದಿನ ಸೆಷನ್‌ನ ಅದೇ ಹಳೆಯ ನಿಲ್ದಾಣದಲ್ಲೇ ಈಗ ಬಂದು ನಿಂತಿದ್ದಳು.

'ಮೂರು, ಎರಡು, ಒಂದು. ಈಗ ನೀನು ಮನಸಿನ ಆಳದ ತುತ್ತತುದಿಯನ್ನು ತಲುಪಿದ್ದೀಯ. ಈಗ ನಿನಗೆ ಹನ್ನೊಂದು ವರ್ಷ. ನಿನ್ನ ಹೆಸರೇನು ಹೇಳು?'

'ಪಿಂಕಿ' ನಿವಿಯ ಹಾವಭಾವ ಬದಲಾಗಿತ್ತು.

ಅವಳ ದನಿ ಸುಮಾರು ಹನ್ನೊಂದು ವರ್ಷದ ಬಾಲಕಿಯಂತೆ ಸಣ್ಣದಾಗಿತ್ತು.

'ಹೇಳು ನನಗೆ ಈಗ. ನಿನ್ನ ಜೊತೆ ಏನು ನಡೀತು?'

ನಿವಿಯ ಮುಖ ಏಕಾಏಕಿ ಬದಲಾಯಿತು. ಅವಳು ಮತ್ತೆ ಭಯಗ್ರಸ್ತಳಾಗಿ ಮುದುರಿ ಕುಳಿತು ನೋವಿನಿಂದ ಅಳತೊಡಗಿದಳು.

'ಬೇಡ. ನನಗೆ ಭಯವಾಗುತ್ತೆ. ಅಮ್ಮಾ...'